**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 154/2017 ಸಿ.ಡಬ್ಲೂ.1 ಪಿ.ಡಬ್ಲೂ.2

| | |
|---|---|
| ಹೆಸರು | ನಾಗಮ್ಮ |
| ತಂದೆ/ಗಂಡ | ಗುರುಶಾಂತಯ್ಯ |
| ವಯಸ್ಸು | 60 ವರ್ಷ |
| ಉದ್ಯೋಗ | ಮನೆ ಕೆಲಸ |
| ವಾಸಸ್ಥಳ | ಹಿತ್ತಲಶೀರೂರ ಗ್ರಾಮ |

ದಿನಾಂಕ 06-03-2026

ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ಆರೋಪಿತರ ಪರಿಚಯ ಇರುತ್ತದೆ. ಚಾಸಾ 4 ನನ್ನ ಅಕ್ಕನ ಮಗಳು, ಚಾಸ-2,3,5,6 ರವರ ಪರಿಚಯ ಇರುತ್ತದೆ. ಸಮಾರು 8 ವರ್ಷಗಳ ಹಿಂದೆ ನಾನು ಸಾಯಂಕಾಲ ಸಮಯದಲ್ಲಿ ಮನೆಯಲ್ಲಿ ಮಲಗಿಕೊಂಡಾಗ ಆರೋಪಿತರು ಚಾಸ-4ರವರೊಂದಿಗೆ ಜಗಳ ಮಾಡುತ್ತಿದ್ದಾಗ ನಾನು ಬಿಡಿಸಲು ಹೋಗಿದ್ದೇ ಆಗ ನನಗೆ ನಿನಗೂ ಇದಕ್ಕೂ ಸಂಬಂದ ಇಲ್ಲ ಎಂದು ಹೇಳಿ ನಮ್ಮ ಮದ್ಯೆ ಬರಬೇಡ ಅಂತಾ ಬೈದು ಕೂದಲು ಹಿಡಿದು ಜಗ್ಗಾಡಿ ಸೀರೆ ಹಿಡಿದು ಎಳೆದಾಡಿ ಹೊಡೆಬಡೆ ಮಾಡಿರುತ್ತಾರೆ. ನಂತರ ಪೋಲಿಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿಯು ದೂರಿನ ಮೇಲೆ ಇರುವ ಅವರ ಹೆಬ್ಬಟ್ಟಿನ ನೋಡಿ ಗುರುತಿಸಿದ್ದು ದೂರನ್ನು ನಿಪಿ. 1 ಅಂತಾ, ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು. )**

ಪಾಟೀ ಸವಾಲುಃ ಮಾನ್ಯ ಸ ಸ ಅ ವಕೀಲರಿಂದ:

ನಾನು ಹಿತ್ತಲಶೀರೂರ ಅಲ್ಲಿ ಇರುವ ನನ್ನ ತವರು ಮನೆಗೆ ನನ್ನ ತಮ್ಮನನ್ನು ಮಾತನಾಡಿಸಲು ಬಂದಿದ್ದೇನು ಎಂದರೆ ಸರಿ. ಜಗಳವನ್ನು ಚಾಸ-4 ಮತ್ತು 5ರವರು ಬಿಡಿಸಿರುತ್ತಾರೆ ಎಂದರೆ ಸರಿ. ಜಗಳ ಬಿಡಿಸಿದ ನಂತರ ಆರೋಪಿತರು ನನಗೆ ಜೀವ ಬೇದರಿಕೆ ಹಾಕಿರುತ್ತಾರೆ ಎಂದರೆ ಸರಿ. ದೂರನ್ನು ಸಲ್ಲಿಸಿದ ಮರುದಿನ ಮುಂಜಾನೆ 09.00 ರಿಂದ 10.00 ಗಂಟೆಯವರೆಗೆ ನಾನು ತೋರಿಸಿದ ಸ್ಥಳದಲ್ಲಿ ಪೋಲಿಸರು ಚಾಸ-2 ಮತ್ತು 3ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ.

ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಾಯವಕಾಶ ಕೋರಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ